**ದಿನಾಂಕಃ 17/09/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 2 ರಿಂದ 6 ನೇ ಪ್ರತಿವಾದಿ ಪರ ಶ್ರೀ. ಎನ್ ಕೆ ವಕೀಲರಿಂದಃ**

1. ಚನ್ನೇಗೌಡರ ಮಗ ಹೆಚ್ ಸಿ ಕೃಷ್ಣೆ ಗೌಡ ಎಂದರೆ ನಾನೇ. ಹಾರನಹಳ್ಳಿ ಗ್ರಾಮದ ಸ.ನಂ. 1/2 ರಲ್ಲಿ 4 ಗುಂಟೆ, ಕೆಸರೆ ಗ್ರಾಮದ ಸ. ನಂ.5 ರಲ್ಲಿ 1 ಎಕರೆ 8 ಗುಂಟೆ, ಅದೇ ಗ್ರಾಮದ ಸ.ನಂ.5 ರಲ್ಲಿ 1 ಎಕರೆ 8 ಗುಂಟೆ ಜಮೀನು ಪಿತ್ರಾರ್ಜಿತವಾಗಿ ಬಂದಿದೆ ಎಂದರೆ ಸರಿ. ಸ.ನಂ.5 ರಲ್ಲಿರುವ 1 ಎಕರೆ 8 ಗುಂಟೆ ಜಮೀನು ನನ್ನ ಅಣ್ಣ-ಪುಟ್ಟೇಗೌಡ ಮತ್ತು ತಾಯಿ-ತಿಮ್ಮಾಜಮ್ಮ ನ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸರಿ. ಕೆಸರೆ ಗ್ರಾಮದ ಸ.ನಂ. 11 ರಲ್ಲಿ 17 ಗುಂಟೆ ಜಮೀನು ಪಿತ್ರಾರ್ಜಿತವಾಗಿ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಹಾರನಹಳ್ಳಿ ಗ್ರಾಮದ ಸ.ನಂ.12/6 ರಲ್ಲಿ 1 ಎಕರೆ ನನ್ನ ಅಣ್ಣ ಪುಟ್ಟೇಗೌಡರಿಗೆ ಪಿತ್ರಾರ್ಜತವಾಗಿ ಬಂದಿದೆ ಎಂದರೆ ಸರಿ. ಅದೇ ರೀತಿ ನನ್ನ ಹೆಸರಿನಲ್ಲಿ ಪಿತ್ರಾರ್ಜಿತವಾಗಿ ಸ.ನಂ. 12/7 ರಲ್ಲಿ 1 ಎಕರೆ ಜಮೀನು ಎಂದರೆ ಸರಿ. ಹಾರನಹಳ್ಳಿ ಗ್ರಾಮದ ಸ.ನಂ.18/1 ರ 22 ಗುಂಟೆ ಜಮೀನು ಪಿತ್ರಾರ್ಜಿತವಾಗಿದೆ ಎಂದರೆ ಸಾಕ್ಷಿಯು ಅದನ್ನು ಮಾರಾಟ ಮಾಡಲಾಗಿದೆ ಎಂದು ನುಡಿಯುತ್ತಾರೆ.

2. ಸಾಕಮ್ಮ ನನ್ನ ತಂಗಿ. ಸ.ನಂ.41/8 ರ 38 ಗುಂಟೆ, ಸ.ನಂ.41/2 ರ 24 ಗುಂಟೆ, ಸ.ನಂ.41/13 ರ 11 ಗುಂಟೆ ಜಮೀನು ಸಾಕಮ್ಮ ನವರ ಗಂಡನದ್ದು. ನನ್ನ ತಾಯಿಯ ಹೆಸರು ತಿಮ್ಮಮ್ಮ ಅಲಿಯಾಸ್ ತಿಮ್ಮಾಜಮ್ಮ. ದಾವಾ ಸ್ವತ್ತುಗಳು ಮೂಲತಃ ನನ್ನ ಅಜ್ಜಿ ಸಣ್ಣಮ್ಮ ನವರಿಗೆ ಸೇರಿದ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸಣ್ಣಮ್ಮ ನನ್ನ ತಾಯಿಯ ತಾಯಿ ಆಗಬೇಕು. ಸಣ್ಣಮ್ಮ ನವರಿಗೆ ಚನ್ನಮ್ಮ, ಅಕ್ಕಲಮ್ಮ, ತಿಮ್ಮಾಜಮ್ಮ ಮತ್ತು ರಾಮಮ್ಮ ಎಂಬ 4 ಜನ ಮಕ್ಕಳು ಎಂದರೆ ಸರಿ. ನನ್ನ ದೊಡ್ಡಮ್ಮನ ಹೆಸರು ಅಕ್ಕಲಮ್ಮ ಎಂದು ನನಗೆ 30-40 ವರುಷಗಳ ಹಿಂದೆ ಗೊತ್ತಿತ್ತು ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಅವರ ಹೆಸರು ಅಕ್ಕಲಮ್ಮ ಎಂದು ತೋರಿಸಲು ತೊಂದರೆ ಇರಲಿಲ್ಲ. ಚನ್ನಮ್ಮನಿಗೆ ಗೋವಿಂದೇಗೌಡ, ರಾಮೇಗೌಡ, ಕಮಾರ, ಸಣ್ಣ ಕಾಳಮ್ಮ ಮತ್ತು ರೇಣುಕ ಎಂಬ

ಮಕ್ಕಳು ಎಂದರೆ ಸರಿ. ಗೋವಿಂದೇಗೌಡರು ಮರಣಗೊಂಡಿದ್ದಾರೆ. ಅವರಿಗೆ ಇಬ್ಬರು ಗಂಡು ಮಕ್ಕಳು. ರಾಮೇಗೌಡರು ಬದುಕಿದ್ದಾರೆ. ನನ್ನ ದೊಡ್ಡಮ್ಮ ಚನ್ನಮ್ಮ ನವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ. ನಾನು ಹುಟ್ಟುವ ಮುನ್ನ ಸಣ್ಣಮ್ಮ ನವರು ತೀರಿಕೊಂಡಿದ್ದರು. ಅಕ್ಕಲಮ್ಮ ತೀರಿಕೊಂಡು 5 ವರುಷಗಳು ಕಳೆದಿದೆ. ಚನ್ನಮ್ಮ ತೀರಿಕೊಂಡು 40 ವರುಷಗಳು ಕಳೆದಿವೆ. ನನ್ನ ತಾಯಿ 2012 ರಲ್ಲಿ ತೀರಿಕೊಂಡಿದ್ದಾರೆ. ರಾಮಮ್ಮ ತೀರಿಕೊಂಡು ಎಷ್ಟು ವರುಷ ಆಗಿದೆ ಎಂದು ಗೊತ್ತಿಲ್ಲ.

3. ಸಣ್ಣಮ್ಮನವರು ಅಕ್ಕಲಮ್ಮ ಮತ್ತು ತಿಮ್ಮಮ್ಮನಿಗೆ ವಿಲ್ ಮಾಡಿದ್ದರು. ಯಾವಾಗ ವಿಲ್ ಮಾಡಿದ್ದರು ಎಂದು ಗೊತ್ತಿಲ್ಲ. ವಿಲ್ ಪತ್ರವನ್ನು ನಾನು ನೋಡಿದ್ದೇನೆ. ಅದನ್ನು ನನ್ನ ವಕೀಲರಿಗೆ ನೀಡಿ ಬಹಳ ವರುಷಗಳಾಗಿವೆ. ವಿಲ್ ಪ್ರಕಾರ ನನ್ನ ತಾಯಿ ಹೆಸರಿಗೆ ಸ.ನಂ.46, 47 ಮತ್ತು 48 ರಲ್ಲಿ 14 ಎಕರೆ ಚಿಲ್ಲರೆ ಗುಂಟೆ ಬಂದಿತ್ತು. ಅಕಲಮ್ಮ ರವರಿಗೂ ಅಷ್ಟೇ ಎಕರೆ ಬಂದಿತ್ತು. ರಾಮಮ್ಮನಿಗೂ ಮತ್ತು ಚನ್ನಮ್ಮನಿಗೆ ಜಮೀನು ನೀಡಿಲ್ಲ.

4. ದಾವಾ ಸ್ವತ್ತುಗಳು ಅಕ್ಕಲಮ್ಮ ಮತ್ತು ತಿಮ್ಮಮ್ಮ ರವರ ಹೆಸರಿನಲ್ಲಿತ್ತು. ಈಗ ದಾವಾ ಸ್ವತ್ತುಗಳು ಪ್ರತಿವಾದಿಗಳ ಹೆಸರಿನಲ್ಲಿದೆ. ಅವರ ಹೆಸರಿಗೆ ವರ್ಗಾವಣೆಗೊಂಡು 40 ವರುಷಗಳು ಕಳೆದಿವೆ. ಅವರ ಹೆಸರಿಗೆ ಹೋದಂತಹ ಖಾತೆಗಳು ಮತ್ತು ನಮ್ಮ ಹೆಸರಿಗೆ ಬಂದಂತಹ ಖಾತೆಗಳ ಬಗ್ಗೆ ನನಗೆ 40 ವರುಷಗಳ ಹಿಂದೆ ಗೊತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿ ತೀರಿಕೊಂಡ ನಂತರ ಗೊತ್ತಾಯಿತು ಎಂದು ನುಡಿಯುತ್ತಾರೆ. ಯಾವ ದಾಖಲಾತಿಯ ಮುಖಾಂತರ ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾವಣೆ ಆಯಿತು ಎಂದು ದಾಖಲಾತಿ ಪಡೆದಿದ್ದೇನೆ. ನಾನು ಎಸಿ ಯವರ ಮುಂದೆ ಸದರಿ ಖಾತೆಯನ್ನು ಪ್ರಶ್ನಿಸಿಲ್ಲ. ತಹಸೀಲ್ದಾರರಿಂದ ವಂಶವೃಕ್ಷವನ್ನು ಪಡೆದಿದ್ದೇನೆ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**